# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 609/2015 ಸಿಡಬ್ಲೂ: 7 ಪಿಡಬ್ಲೂ: 4

ಪ್ರಮಾಣವಚನ ಬೋಧಿಸಲಾಯಿತು ದಿಃ 13-12-2024

ಹೆಸರು : ಆನಂದ

ತಂದೆ ಹೆಸರು : ವೀರಯ್ಯ ಸ್ವಾಮಿ

ವಯಸ್ಸು : 32 ವರ್ಷ

ಉದ್ಯೋಗ : ಒಕ್ಕಲತನ ಕೆ

ವಾಸಸ್ಥಳ : ಬಡಗೇರ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಮೃತ ಮಹಾನಂದ ನನ್ನ ತಮ್ಮ. ಚಾ ಸಾ 1 ರವರು ನನ್ನ ಕಾಕಾ. ಚಾ ಸಾ 6 ನನ್ನ ಅಣ್ಣ. ಚಾ ಸಾ 8 ನನ್ನ ತಂದೆ. ಮೃತ ಮಹಾನಂದ ರವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ.

ದಿ. 25-02-2015 ರಂದು ಸಾಯಂಕಾಲ ಒಂದು ಬುಲೇಟ್ ಗಾಡಿಯ ಮೇಲೆ ಬಟಗೇರಾದಿಂದ ಸೇಡಂಗೆ ಕೆ ಎ 32 ಇ ಡಿ 0712 ನೇದ್ದರ ಮೇಲೆ ಹೋಗಿದ್ದರು.ಸದರಿ ಮೋಟಾರು ಸೈಕಲ್ ಮೃತ ಮಹಾನಂದ ನಡೆಯಿಸುತ್ತಿದ್ದನು. ನಂತರ ಸೇಡಂನಿಂದ ಬಟಗೇರಾ ಗ್ರಾಮಕ್ಕೆ ಮರಳಿ ಬರುತ್ತಿರುವಾಗ ಕೊಡ್ಲಾ ಕ್ರಾಸ್ ಹತ್ತಿರ ಸದರಿ ಮೊಟಾರು ಸೈಕಲ್ ಮತ್ತು ಲಾರಿ ಎಂ ಎಚ್ 12 ಎಚ್ 4724 ನಡುವೆ ಆಗಿತ್ತು. ಸದರಿ ಅಪಘಾತ ಆಗಿರುವ ವಿಷಯ ನನಗೆ ಚಾ ಸಾ 10 ರವರು ನನಗೆ ತಿಳಿಸಿರುತ್ತಾರೆ. ಆಗ ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿ ನೋಡಲಾಗಿ ಮೃತ ಮಹಾನಂದ ಈತನ ಮೆದುಳು ತಲೆಯಿಂದ ಹೊರಗೆ ಬಂದಿತ್ತು ಹಾಗೂ ಚಾ ಸಾ 9 ರ ವರ ಭುಜದ ಮೇಲೆ ಹಾಗೂ ಇನ್ನಿತರ ಭಾಗದ ಮೇಲೆ ಗಾಯಗಳು ಆಗಿತ್ತು. ನಂತರ ನಾನು ಮೃತ ಮಹಾನಂದ ಹಾಗೂ ಚಾ ಸಾ 9 ರವರಿಗೆ ಸರ್ಕಾರಿ ಆಸ್ಪತ್ರೆ ಸೇಡಂ ಗೆ ಕರೆದುಕೊಂಡು ಹೋಗಿದ್ದು ಸದರಿ ಲಾರಿ ಚಾಲಕ ಅಪಘಾತ ಮಾಡಿ ಸ್ಥಳದಿಂದ ಹೋಡಿ ಹೋಗಿರುತ್ತಾನೆ. ನಂತರ 02-03-2015 ರಂದು ಪೋಲೀಸ್ ಠಾಣೆಗೆ ಹೋಗಿ ನೋಡಲಾಗಿ ಪೋಲೀಸರು ನನಗೆ ಸದರಿ ಆರೋಪಿತರನ್ನು ತೋರಿಸಿರುತ್ತಾರೆ ಆತನ ತನ್ನ ಹೆಸರು ಸತೀಶ್ ಅಂತಾ ತಿಳಿಸಿರುತ್ತಾರನೆ. ಸದರಿ ಅಪಘಾತ ಆರೋಪಿತನು ತನ್ನ ವಶದಲ್ಲಿದ್ದ ಲಾರಿಯನ್ನು ಅತಿ ವೇಗದಿಂದ ಹಾಗೂ ನಿಷ್ಕಾಳಜಿಯಿಂದ ಬಂದಿರುವುದರಿಂದ ಆಗಿರುತ್ತದೆ.

(ಆರೋಪಿತನು ಗೈರು ಹಾಜರು ಇದ್ದು ಆರೋಪಿತರ ವಕೀಲರು ಆರೋಪಿತನ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ವಾದಿ ಮಂಡಿಸಿರುತ್ತಾರೆ).

**ಪಾಟೀಸವಾಲುಃ** ಆರೋಪಿ ಪರ ಶ್ರೀ ಸಿ ಬಿ ವಕೀಲರಿಂದ ಃ

ನಾನು ಬಿ ಎ ತನಕ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಘಟನೆ ನಡೆದ ದಿನಾಂಕ ಮತ್ತು ವಾರ ಹೇಳಲು ಬರುತ್ತದೆ. ನಾನು ಒಕ್ಕಲುತನ ಮಾಡುತ್ತೇನೆ. ಸಿಮೆಂಟ್ ಫ್ಯಾಕ್ಟರಿಗೆ 4 ಗೇಟುಗಳು ಇರುತ್ತವೆ. ಬಟಗೇರ ಗ್ರಾಮದಿಂದ ಅಪಘಾತ ಸ್ಥಳ 3 ಕಿ ಮಿ ಅಂತರದಲ್ಲಿದೆ. ಮೊಟಾರು ಸೈಕಲ್ ಮುಖಾಂತರ ಹೋದರೆ 10 ರಿಂದ 15 ನಿಮಿಷ ಬೇಕಾಗುತ್ತದೆ. ಅಪಘಾತ ಆದ ಸಮಯದಲ್ಲಿ ನಾನು ಬಟಗೇರಾ ಗ್ರಾಮದಲ್ಲಿ ಇದ್ದೆನು. ನಾನು ಸದರಿ ಅಪಘಾತ ಕಣ್ಣಾರೆ ಕಂಡಿಲ್ಲ. ಸಾಕ್ಷಿಯು ಮುಂದುವರೆದು ನಾನು ಅಪಘಾ಼ತ ಆದ ನಂತರ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಚಾ ಸಾ 10 ರವರು ಅಪಘಾ಼ತದ ಬೆಗ್ಗೆ ನನಗೆ ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಚಾ ಸಾ 10 ರವರು ಯಾವ ಮೊಬೈಲ್ ನಂಬರ ದಿಂದ ಪೋನು ಮಾಡಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ಘಟನಾ ಸ್ಥಳ ರಾಜ್ಯ ಹೆದ್ದಾರಿ ಇರುವುದರಿಂದ ಎರಡೂ ಕಡೆಯಿಂದ ವಾಹನಗಳು ವಹಿವಾಟು ಇರುತ್ತದೆ ಎಂದರೆ ಸರಿ.

ಬಟಗೇರ ಗ್ರಾಮದಿಂದ ಫ್ಯಾಕ್ಟರಿಕಡೆ ಹೋಗುವಾಗ ಒಂದು ತಿರುವು ಇದೆ ಎಂದರೆ ಸರಿ. ಆ ತಿರುವು ಇರುವುದರಿಂದ ವಾಹನಗಳು ಅತಿ ನಿದಾನವಾಗಿ ಹೋಗುತ್ತವೆ ಎಂದರೆ ಸಾಕ್ಷಿಯು ಸದರಿ ತಿರುವು 2 ಕಿ ಮಿ ದೂರ ಅಂತರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ಯಾದಗಿರಿ ಯಿಂದ ಬರುವ ರಸ್ತೆ ಯು ಕೂಡ ಅದೇ ರಸ್ತೆಗೆ ಬಂದು ಸೇರುತ್ತದೆ ಎಂದರೆ ಸರಿ. ಕೋಡ್ಲಾ ಕ್ರಾಸ್ ಹತ್ತಿರ ಬಹಳಷ್ಟು ಸ್ಪೀಡ್ ಬ್ರೇಕರ್ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಮೊದಲು ಇರಲಿಲ್ಲ ಈಗ ಹಾಕಿರುತ್ತಾರೇ ಎಂದು ನುಡಿಯುತ್ತಾರೆ. ನಾನು ನನ್ನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ಸದರಿ ಘಟನಾ ಸ್ಥಳದಲ್ಲಿ ಬಹಳಷ್ಟು ವಾಹನಗಳು ಒಡಾಟ ಇರುವುದರಿಂದ ವಾಹನಗಳು ಬಹಳ ನಿದಾನವಾಗಿ ನಡೆಸಿರುತ್ತಾರೆ ಎಂದರೆ ಸರಿಯಿಲ್ಲ. ಮೃತ ಮಹಾನಂದ ಈತನ ವಾಹನ ಪರವಾನಗಿ ಇರುತ್ತದೆ. ಘಟನಾ ಸ್ಥಳದ ಚಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ಆರೋಪಿತನಿಗೂ ಹಾಗೂ ಈ ಘಟನೆಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಿಲ್ಲ. ನನಗೆ ಪರಿಹಾರ ಸಿಕ್ಕಿರುವ ಬಗ್ಗೆ ಗೊತ್ತಿಲ್ಲ. ಮೃತ ಮಹಾನಂದ ಹಾಗೂ ಚಾ ಸಾ 10 ರವರು ಸೇಡಂ ಗೆ ಯಾವ ಕೆಲಸಕ್ಕಾಗಿಹೋಗಿದ್ದರು ನನಗೆ ಗೊತ್ತಿಲ್ಲ.

ದಿ. 25-02-2015 ರಂದು ಸಾಯಂಕಾಲ ಒಂದು ಬುಲೇಟ್ ಗಾಡಿಯ ಮೇಲೆ ಬಟಗೇರಾದಿಂದ ಸೇಡಂಗೆ ಕೆ ಎ 32 ಇ ಡಿ 0712 ನೇದ್ದರ ಮೇಲೆ ಹೋಗಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ

ಎಂದರೆ ಸರಿಯಿಲ್ಲ. ಸದರಿ ಮೋಟಾರು ಸೈಕಲ್ ಮೃತ ಮಹಾನಂದ ನಡೆಯಿಸುತ್ತಿದ್ದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಸೇಡಂನಿಂದ ಬಟಗೇರಾ ಗ್ರಾಮಕ್ಕೆ ಮರಳಿ ಬರುತ್ತಿರುವಾಗ ಕೊಡ್ಲಾ ಕ್ರಾಸ್ ಹತ್ತಿರ ಸದರಿ ಮೊಟಾರು ಸೈಕಲ್ ಮತ್ತು ಲಾರಿ ಎಂ ಎಚ್ 12 ಎಚ್ 4724 ನಡುವೆ ಆಗಿತ್ತು. ಸದರಿ ಅಪಘಾತ ಆಗಿರುವ ವಿಷಯ ನನಗೆ ಚಾ ಸಾ 10 ರವರು ನನಗೆ ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿ ನೋಡಲಾಗಿ ಮೃತ ಮಹಾನಂದ ಈತನ ಮೆದುಳು ತಲೆಯಿಂದ ಹೊರಗೆ ಬಂದಿತ್ತು ಹಾಗೂ ಚಾ ಸಾ 9 ರ ವರ ಭುಜದ ಮೇಲೆ ಹಾಗೂ ಇನ್ನಿತರ ಭಾಗದ ಮೇಲೆ ಗಾಯಗಳು ಆಗಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ನಾನು ಮೃತ ಮಹಾನಂದ ಹಾಗೂ ಚಾ ಸಾ 9 ರವರಿಗೆ ಸರ್ಕಾರಿ ಆಸ್ಪತ್ರೆ ಸೇಡಂ ಗೆ ಕರೆದುಕೊಂಡು ಹೋಗಿದ್ದು ಸದರಿ ಲಾರಿ ಚಾಲಕ ಅಪಘಾತ ಮಾಡಿ ಸ್ಥಳದಿಂದ ಹೋಡಿ ಹೋಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ 02-03-2015 ರಂದು ಪೋಲೀಸ್ ಠಾಣೆಗೆ ಹೋಗಿ ನೋಡಲಾಗಿ ಪೋಲೀಸರು ನನಗೆ ಸದರಿ ಆರೋಪಿತರನ್ನು ತೋರಿಸಿರುತ್ತಾರೆ ಆತನ ತನ್ನ ಹೆಸರು ಸತೀಶ್ ಅಂತಾ ತಿಳಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಅಪಘಾತ ಆರೋಪಿತನು ತನ್ನ ವಶದಲ್ಲಿದ್ದ ಲಾರಿಯನ್ನು ಅತಿ ವೇಗದಿಂದ ಹಾಗೂ ನಿಶ್ಕಾಳಜಿಯಿಂದ ಬಂದಿರುವುದರಿಂದ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**